**<u>ವರ್ಗಾವಣೆಯ ಲಿಖಿತಗಳ ಅಧಿನಿಯಮ ಕಲಂ 142(ಬಿ) ರಡಿ ಸಲ್ಲಿಸಿದ ಅರ್ಜಿಯ ಮೇಲೆ ಆದೇಶ</u>**

1. ಅರ್ಜಿಯನ್ನು ಪಿರ್ಯಾದುದಾರರು ವರ್ಗಾವಣೆಯ ಲಿಖಿತಗಳ ಅಧಿನಿಯಮ 142(ಬಿ) ರಡಿ ಸಲ್ಲಿಸಿ, ತಮ್ಮ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಸಂಗತಿಗಳ ಆಧಾರದ ಮೇಲೆ ಈ ಪ್ರಕರಣ ಸಲ್ಲಿಸಲು ಆದ 05 ದಿನಗಳ ವಿಳಂಬವನ್ನು ಮನ್ನಿಸಬೇಕೆಂದು ಕೋರಿಕೊಂಡು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಸದರಿ ಅರ್ಜಿಗೆ ಪೂರಕವಾಗಿ ಪಿರ್ಯಾದುದಾರರು ತಮ್ಮ ಪ್ರಮಾಣ ಪತ್ರ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ಆರೋಪಿಯು ತಮಗೆ ನೀಡಬೇಕಾದ ಹಣದ ಮರುಪಾವತಿಗಾಗಿ ಈ ಪ್ರಕರಣದ ಚೆಕ್ಕನ್ನು ನೀಡಿದ್ದು, ಸದರಿ ಚೆಕ್ಕನ್ನು ನಗಧೀಕರಣಕ್ಕಾಗಿ ಹಾಜರುಪಡಿಸಿದಾಗ ಆರೋಪಿ ನೀಡಿದ ಚೆಕ್ಕು ಅಮಾನ್ಯಗೊಂಡಿದ್ದು, ಹೀಗಾಗಿ ತಾನು ತಮ್ಮ ವಕೀಲರ ಮೂಲಕ ದಿನಾಂಕ 10-04-2021ರಂದು ಆರೋಪಿಗೆ ನೋಟಿಸು ಕಳುಹಿಸಿದ್ದು, ಸದರಿ ನೋಟಿಸು ದಿನಾಂಕ 15-04-2021ರಂದು ಆರೋಪಿಗೆ ಜಾರಿಯಾಗಿರುತ್ತದೆ. ಆದರೆ ಆರೋಪಿಯು ನಿಗಧಿತ ಅವಧಿಯಲ್ಲಿ ಈ ಪ್ರಕರಣದ ಚೆಕ್ಕಿನ ಮೊತ್ತವನ್ನು ನೀಡದ ಕಾರಣ ತಾವು ಈ ದೂರನ್ನು ಆರೋಪಿಯ ವಿರುದ್ಧ ಸಲ್ಲಿಸಿರುವುದಾಗಿ, ಕೋವಿಡ್ 19ರ ಮಹಾಮಾರಿ ದೇಶವ್ಯಾಪ್ತಿ ಹರಡಿರುವುದರಿಂದ ಈ ದೂರನ್ನು ಸಲ್ಲಿಸಲು 05 ದಿನಗಳ ವಿಳಂಬವಾಗಿರುತ್ತವೆ. ಹೀಗಾಗಿ ಸದರಿ 05 ದಿನಗಳ ವಿಳಂಬವನ್ನು ಮನ್ನಿಸಲು ಕೋರಿಕೊಂಡಿರುತ್ತಾರೆ. ಒಂದು ವೇಳೆ ಸದರಿ ವಿಳಂಬವನ್ನು ಮನ್ನಿಸದೇ ಹೋದ ಪಕ್ಷದಲ್ಲಿ ತಮಗೆ ತುಂಬಲಾರದ ನಷ್ಟ ವ ಹಾನಿ ಉಂಟಾಗುತ್ತದೆ ಎಂದು ಪಿರ್ಯಾದುದಾರರು ತಮ್ಮ ಪ್ರಮಾಣ ಪತ್ರದಲ್ಲಿ ನಿವೇದಿಸಿಕೊಂಡಿರುತ್ತಾರೆ.

3. ಸದರಿ ಅರ್ಜಿಗೆ ಆರೋಪಿ ಪರ ವಕೀಲರು ತಮ್ಮ ತಕರಾರು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ ಪಿರ್ಯಾದುದಾರರು ಸಲ್ಲಿಸಿರುವ ಈ ಅರ್ಜಿಯು ಕಾನೂನಿನಡಿಯಲ್ಲಾಗಲೀ, ವಸ್ತುವಿಷಯದಡಿಯಲ್ಲಾಗಲೀ, ಊರ್ಜಿತವಾಗಿರುವುದಿಲ್ಲ. ಈ ಪ್ರಕರಣದ ಪಿರ್ಯಾದುದಾರರು ಆರೋಪಿಗೆ ದಿನಾಂಕ 10-04-2021ರಂದು ನೋಟಿಸು ಕಳುಹಿಸಿದ್ದು, ಸದರಿ ನೋಟಿಸನ್ನು

ಆರೋಪಿಯು ದಿನಾಂಕ 15-04-2021ರಂದು ಸ್ವೀಕಾರ ಮಾಡಿರುತ್ತಾನೆ. ಹೀಗಾಗಿ ಈ ದೂರನ್ನು ಸಲ್ಲಿಸಲು ಪಿರ್ಯಾದುದಾರರು ದಿನಾಂಕ 01-05-2021 ರಿಂದ 31-05-2021ರ ಒಳಗಾಗಿ ಸಲ್ಲಿಸಬೇಕಾಗಿರುತ್ತದೆ. ಆದರೆ ಪಿರ್ಯಾದುದಾರರು ಈ ದೂರನ್ನು 04-06-2021 ರಂದು 05 ದಿನಗಳ ವಿಳಂಬ ಮಾಡಿ ಸಲ್ಲಿಸಿರುತ್ತಾನೆ. ಮಾನ್ಯ ಗೌರವಾನ್ವಿತ ಉಚ್ಚ ನ್ಯಾಯಾಲಯದವರು ಕೋವಿಡ್ -19ರ ಸಮಯದಲ್ಲಿ ಎಸ್ ಓ ಪಿ ಯನ್ನು ಹೊರಡಿಸಿದ್ದಕ್ಕಾಗಿ ನ್ಯಾಯಾಲಯಗಳು ಕಾರ್ಯ ನಿರ್ವಹಿಸುತ್ತಿದ್ದವು, ಹೀಗಾಗಿ ಪಿರ್ಯಾದುದಾರರಿಗೆ ಈ ಹಂತದಲ್ಲಿ ಈ ಅರ್ಜಿಯನ್ನು ಸಲ್ಲಿಸಲು ಕಾನೂನಿನಡಿ ಅವಕಾಶ ಇರುವುದಿಲ್ಲ. ಈಗಾಗಲೇ ಅಂತಿಮ ವಾದ ಮಂಡನೆಗಾಗಿ ಈ ಪ್ರಕರಣವನ್ನು ಮುಂದೂಡಿದಾಗ ಪಿರ್ಯಾದುದಾರರ ದುರುದ್ದೇಶ ಇಟ್ಟುಕೊಂಡು ಇದೊಂದು ಸುಳ್ಳು ಅರ್ಜಿ ಸಲ್ಲಿಸಿರುತ್ತಾರೆ. ಹೀಗಾಗಿ ಅರ್ಜಿದಾರ / ಪಿರ್ಯಾದುದಾರರು ವರ್ಗಾವಣೆಯ ಲಿಖಿತಗಳ ಅಧಿನಿಯಮ ಕಲಂ 142(ಬಿ) ರಡಿ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಲು ಕೋರಿಕೊಂಡಿರುತ್ತಾರೆ.

**4.** ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು. ಆರೋಪಿ ಪರ ವಕೀಲರು ಸಲ್ಲಿಸಿದ ಲಿಖಿತ ವಾದ ಮಂಡನೆಯನ್ನು ಪರಿಶೀಲನೆ ಮಾಡಲಾಯಿತು. ಹೀಗಾಗಿ ಈ ಅರ್ಜಿಯ ವಿಲೇವಾರಿಗೆ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಗಮನಕ್ಕೆ ಉದ್ಭವಾಗಿರುತ್ತವೆ.

ಅಂಶ 1. ಅರ್ಜಿದಾರ / ಪಿರ್ಯಾದುದಾರರು ವರ್ಗಾವಣೆಯ ಲಿಖಿತಗಳ ಅಧಿನಿಯಮ ಕಲಂ 142(ಬಿ) ರಡಿ ಸಲ್ಲಿಸಿದ ಅರ್ಜಿಯನ್ನು ಮಧ್ಯಂತರ ಅರ್ಜಿಯನ್ನು ಪುರಸ್ಕಾರ ಮಾಡಲು ಸಕಾರಣಗಳನ್ನು ನೀಡಿರುತ್ತಾರೆಯೆ?

ಅಂಶ 2. ಯಾವ ಆದೇಶ ?

**5.** ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸುತ್ತೇನೆ.

ಅಂಶ ನಂ.1: ಸಕಾರಾತ್ಮಕವಾಗಿ.

ಅಂಶ ನಂ.2: ಅಂತಿಮ ಆದೇಶದಂತೆ ಈ ಕೆಳಕಂಡ.

## ಕಾರಣಗಳು

6. **ಅಂಶ ನಂ.1ಕ್ಕೆ:** ಪಿರ್ಯಾದುದಾರರು ಆರೋಪಿಯ ವಿರುದ್ಧ ಈ ಖಾಸಗಿ ಪ್ರಕರಣವನ್ನು ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 200ರಡಿ ಸಲ್ಲಿಸಿ ಆರೋಪಿಯು ವರ್ಗಾಣೆಯ ಲಿಖಿತಗಳ ಅಧಿನಿಯಮ ಕಲಂ 138ರಡಿ ಅಪರಾಧ ಎಸಗಿರುತ್ತಾನೆ ಎಂದು ಕೋರಿಕೊಂಡು ಸಲ್ಲಿಸಿರುತ್ತಾರೆ.

7. ಈಗ ಈ ಪ್ರಕರಣವು ಅಂತಿಮ ವಾದಮಂಡನೆಗಾಗಿ ಮುಂದೂಡಿದಾಗ, ಪಿರ್ಯಾದುದಾರರು ಈ ಅರ್ಜಿಯನ್ನು ಸಲ್ಲಿಸಿ, ಈ ದೂರು ಸಲ್ಲಿಸಲು ತಮಗೆ 05 ದಿನ ವಿಳಂಬವಾಗಿದ್ದು, ಸದರಿ ವಿಳಂಬವನ್ನು ಮನ್ನಿಸಬೇಕು ಎಂದು ಕೋರಿಕೊಂಡು ಸಲ್ಲಿಸಿದ್ದು, ಸದರಿ 05 ದಿನ ವಿಳಂಬವಾಗಲು ಕಾರಣ ಕೋವಿಡ್ 19ರ ಮಹಾಮಾರಿ ದೇಶವ್ಯಾಪ್ತಿ ಹರಡಿರುತ್ತದೆ ಎಂದು ತಿಳಿಸಿರುವುದು ಕಂಡು ಬರುತ್ತದೆ. ಮಾನ್ಯ ಗೌರವಾನ್ವಿತ ಸರ್ವೊಚ್ಚ ನ್ಯಾಯಾಲಯ ಮತ್ತು ಮಾನ್ಯ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದವರು ಕೋವಿಡ್ 19ರ ಮಹಾಮಾರಿ ದೇಶವ್ಯಾಪ್ತಿ ಹರಡಿರುವುದರಿಂದ ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ 138ರಡಿ ಸಲ್ಲಿಸುವ ದೂರುಗಳಿಗೆ ಕಾಲಪರಿಮಿತಿಯನ್ನು ಸಡಿಲಿಕೆ ಮಾಡಿರುವುದು ಕಂಡು ಬರುತ್ತದೆ. ಕೋವಿಡ್ 19ರ ಮಹಾಮಾರಿಯಿಂದ ಪಿರ್ಯಾದುದಾರರು ದೂರನ್ನು ನೋಟಿಸು ಜಾರಿಯಾದ 15 ದಿನಗಳ ನಂತರ ಒಂದು ತಿಂಗಳ ಒಳಗಾಗಿ ಸಲ್ಲಿಸದೆ 05 ದಿನ ವಿಳಂಬವಾಗಿ ಈ ದೂರನ್ನು ಸಲ್ಲಿಸಿರುವುದು ಕಂಡು ಬರುತ್ತದೆ. ಮಾನ್ಯ ಗೌರವಾನ್ವಿತ ಸರ್ವೊಚ್ಚ ನ್ಯಾಯಾಲಯ ನಿರ್ದೇಶನದಂತೆ ದೂರು ಸಲ್ಲಿಸಲು ಆದ ವಿಳಂಬ ಮನ್ನಿಸಲು ಪಿರ್ಯಾದುದಾರರು ಸಕಾರಣಗಳನ್ನು ನೀಡಿರುತ್ತಾರೆ ಎಂದು ಪರಿಗಣಿಸಿ ಅಂಶ 1ಕ್ಕೆ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

**8.** **ಅಂಶ ನಂ.2:** ಮೇಲಿನ ಅಂಶ ನಂ.1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಿದ್ದರಿಂದ, ಈ ಕೆಳಗಿನಂತೆ.

**ಆದೇಶ**

- ಪಿರ್ಯಾದುದಾರರು ವರ್ಗಾವಣೆಯ ಲಿಖಿತಗಳ ಅಧಿನಿಯಮ ಕಲಂ.142(ಬಿ)ರಡಿ ಸಲ್ಲಿಸಿದ ಈ ಮಧ್ಯಂತರ ಅರ್ಜಿಯನ್ನು ಪುರಸ್ಕಾರ ಮಾಡಲಾಗಿದೆ.
- ಈ ದೂರು ಸಲ್ಲಿಸಲು ಆದ 05 ದಿನಗಳ ವಿಳಂಬವನ್ನು ಮನ್ನಿಸಲಾಗಿದೆ.
- ಅಂತಿಮ ವಾದ ಮಂಡನೆಗಾಗಿ ದಿನಾಂಕ 15-02-2025 ರಂದು ಕೂಗಿ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನದಂತೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದನ್ನು ಪರಿಷ್ಕರಿಸಿ, ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ದಿನಾಂಕ 11-02-2025 ರಂದು ಘೋಷಿಸಲಾಗಿದೆ.)

**(ರಾಜೀವ ಗೋಳಸಾರ)**
**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಗೋಕಾಕ.**